ದಿನಾಂಕಃ 04-10-2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>

ನಮ್ಮ ತಂದೆ ಪ್ರಖ್ಯಾತ ಹತ್ತಿ ವ್ಯಾಪಾರಸ್ಥರು, ಅವರಿಗೆ ಬಳಗಾನೂರು ಶೆಟ್ ವ್ಯಾಪಾರಸ್ಥರು ಎಂದು ಕರೆಯುತ್ತಿದ್ದರು ಎಂದರೆ ಸರಿ. ಅದೇರೀತಿ 2 ನೇ ಆರೋಪಿಯ ತಂದೆ ಸಹ ಪ್ರತಿಷ್ಠಿತ ವ್ಯಕ್ತಿ ಇದ್ದ ಅವರು ಕೂಡ ನಮ್ಮ ಓಣಿಯಲ್ಲಿಯೇ ಇರುತ್ತಿದ್ದರು ಎಂದರೆ ಸರಿ ಅಲ್ಲ. ಹಳೆ ಬಜಾರಿನ ದಕ್ಷಿಣ ದಿಕ್ಕಿನಲ್ಲಿ ನಮ್ಮ ಸಮುದಾಯದವರೆ ಇರುತ್ತೇವೆ ಎಂದರೆ ನನಗೆ ಗೊತ್ತಿಲ್ಲ. ದೀಲೀಪ್ ಶೆಟ್ ಸಕಲೆಚಾ ರವರ ಪರಿಚಯ ಇದೆ, ಆದರೆ ಅವರ ಮನೆ ಎಲ್ಲಿ ಇದೆ ನನಗೆ ಗೊತ್ತಿಲ್ಲ. ಅವರ ಮನೆ ಪಕ್ಕದಲ್ಲಿಯೇ 2 ನೇ ಆರೋಪಿತರ ಮಠ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಹತ್ತಿ ವ್ಯಾಪಾರದ ಅಂಗಡಿಯ ಎದುರುಗಡೆ ರಸ್ತೆಯ ಆಚೆಗೆ ನಮ್ಮ ಮನೆ ಇತ್ತು ಎಂದರೆ ಸರಿ. ಚಂದನ ಹಾರ್ಡ್ ವೇರ್ ವಿನೋದ ರವರ ಪರಿಚಯ ಇದೆ.

ನಾನು ಸಿಂಧನೂರಿನಲ್ಲಿಯೇ ಹುಟ್ಟಿ ಬೆಳೆದು ಆರ್ ಜಿ ಎಮ್ ಶಾಲೆಯಲ್ಲಿ ಓದಿ ಬೆಳೆದಿದ್ದೇನೆ ಎಂದರೆ ಸರಿ. 2 ನೇ ಆರೋಪಿಯು ನನಗೆ 2012 ನೇ ಸಾಲಿನಿಂದ ಪರಿಚಯ. ಈಗ ನನ್ನ ಮನೆ ಬಪ್ಪೂರ ರಸ್ತೆಯಲ್ಲಿ ಇದೆ. ನನಗೆ ಈಗ ಸುಮಾರು 51 ವರ್ಷ ವಯಸ್ಸು. 2 ನೇ ಆರೋಪಿಯು ನನಗೆ ಚಿಕ್ಕವನಿದ್ದಾಗಿನಿಂದಲೂ ಪರಿಚಯ ಇದ್ದರೂ ಸಹ 2012 ನೇ ಸಾಲಿನಿಂದ ಪರಿಚಯ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ.

2 ನೇ ಆರೋಪಿಯು ಚೀಟಿ ವ್ಯವಹಾರ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ಆ ದಾಖಲೆಯನ್ನು ನಾನೇ ಸೃಷ್ಟಿಸಿ ಸಲ್ಲಿಸಿದ್ದೇನೆ ಎಂದರೆ ಸರಿ ಅಲ್ಲ. ನಾನು ಯಾವುದೇ ದಾಖಲಾತಿಗಳನ್ನು ಸಲ್ಲಿಸದ ಕಾರಣ ಪೋಲೀಸರು ಬಿ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ ಅಲ್ಲ.

1 ನೇ ಆರೋಪಿ ವಿರುದ್ಧ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ ಅಲ್ಲ ನನ್ನ ಮತ್ತು 2 ನೇ ಆರೋಪಿಯ ನಡುವೆ ಯಾವುದೇ ವ್ಯವಹಾರ ಆಗದೇ ಇದ್ದರೂ ಸಹ ಹಳೆ ದ್ವೇಷವನ್ನು ಇಟ್ಟುಕೊಂಡು ಅವರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ ಅಲ್ಲ.

ನನ್ನ ವಿರುದ್ಧ ಹಲವಾರು ಚೆಕ್ ಅಮಾನ್ಯ ಪ್ರಕರಣಗಳು ಇವೆ ಎಂದರೆ ಸರಿ ಅಲ್ಲ. ಒಂದೇ ಇದೆ. ನಾನು ಯಾರ ವಿರುದ್ದ ಚೆಕ್ ಅಮಾನ್ಯ ಪ್ರಕರಣಗಳನ್ನು ಸಲ್ಲಿಸಿಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.